೨. ಅವುಗಳನ್ನು ಮುಂದೆ ಯಾವ ಕಾರ್ಯಕ್ಕಾಗಿ ಬಳಸಲಾಗುವುದು?

ಡಾ।। ಜೀವರಾಜಆಳ್ವ (ಕನ್ನಡ ಮತ್ತು ಸಂಸ್ಕೃತಿ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು).—

೧. ಕರ್ನಾಟಕ ಪಶ್ಚಿಮ ಪ್ರದರ್ಶನ ಪ್ರಾಧಿಕಾರದ ಆಧೀನದಲ್ಲಿವೆ. ಕಟ್ಟಡಗಳು ಪೂರ್ತಿ ನಿರ್ಮಾಣವಾಗಿ ನೀರು ಮತ್ತು ವಿದ್ಯುಚ್ಛಕ್ತಿಯ ಸಂಪರ್ಕವನ್ನು ಕಲ್ಪಿಸಬೇಕಾಗಿದೆ.

೨. ಪ್ರವಾಸೋದ್ಯಮ ಇಲಾಖೆಗೆ ವಹಿಸಿಕೊಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್. ಗಂಗಾಧರನ್.— ೮೦ ಕಟ್ಟಡಗಳಿಗೆ ಎಷ್ಟು ಹಣ ಖರ್ಚಾಯಿತು ಮತ್ತು ಅವು ಎಷ್ಟು ದಿನಗಳಿಂದ ಖಾಲಿ ಇವೆ? ಇದರಿಂದ ನಮಗೆ ನಷ್ಟ ಆಗಿಲ್ಲವೆ? ಅವುಗಳನ್ನು ಸರ್ಕಾರವೇ ಲೋಕೋಪಯೋಗಿ ಇಲಾಖೆಯವರ ವಶಕ್ಕೆ ಕೊಟ್ಟು ವಸತಿ ಸೌಕರ್ಯಕ್ಕೆ ಉಪಯೋಗಿಸುವ ವ್ಯವಸ್ಥೆ ಮಾಡುತ್ತೀರಾ ?

ಡಾ।। ಜೀವರಾಜಆಳ್ವ.— ಕಟ್ಟಡಗಳಿಗೆ ಎಷ್ಟು ಖರ್ಚಾಗಿದೆ ಎಂಬ ವಿವರ ಈಗ ನನ್ನ ಹತ್ತಿರ ಇಲ್ಲ ಉತ್ತರದಲ್ಲಿ ಹೇಳಿರುವ ಹಾಗೆ ನಿರ್ಮಾಣ ಕಾರ್ಯ ಇನ್ನೂ ಪೂರ್ಣವಾಗಿದೆ ಎಂದು ಹೇಳುವ ಹಾಗೆ ಇಲ್ಲ. ಕಾರಣಾಂತರಗಳಿಂದ ಇದನ್ನು ಪ್ರವಾಸೋದ್ಯಮ ಇಲಾಖೆಗೆ ಕೊಡಬೇಕೆಂದು ಇದೆ.

ಶ್ರೀ ಹೆಚ್. ಗಂಗಾಧರನ್.— ಪ್ರವಾಸೋದ್ಯಮ ಇಲಾಖೆಗೆ ಕೊಟ್ಟರೆ ಯಾವುದೇ ಇಲಾಖೆಯ ಅಧಿಕಾರಿಗಳಿಗೆ ಅವು ವಾಸದ ಮನೆಗಳಾಗಿ ಸಿಗುವುದಿಲ್ಲ. ಅವನ್ನು ಏನೋ ಉದ್ದೇಶದಿಂದ ಕಟ್ಟಿದರು. ಅವು ಬಾಕಿ ದಿನಗಳಲ್ಲಿ ಹಾಗೇ ಖಾಲಿ ಇರುವುದರ ಬದಲಾಗಿ ಅಧಿಕಾರಿಗಳಿಗೆ ವಾಸಕ್ಕೆ ಕೊಡುವುದಾದರೆ ೮೦ ಜನಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಇದನ್ನು ಪರಿಶೀಲಿಸುತ್ತೀರಾ?

ಡಾ।। ಜೀವರಾಜ ಆಳ್ವ.— ಸರ್ಕಾರ ಇಲ್ಲಿಯವರೆಗೆ ಅವುಗಳ ಬಗ್ಗೆ ಯಾವುದೇ ತೀರ್ಮಾನ ತೆಗೆದು ಕೊಂಡಿಲ್ಲ. ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತದೆ.

ತಿಪಟೂರು ತಾಲ್ಲೂಕಿನ ಕೆಲವು ಗ್ರಾಮಗಳ ಆಸ್ಪತ್ರೆಗಳಿಗೆ ವೈದ್ಯಾಧಿಕಾರಿಗಳನ್ನು ನೇಮಿಸದಿರುವುದು

೬೨ (೧೫೪೪) ಶ್ರೀ ಎಸ್. ಪಿ. ಗಂಗಾಧರಪ್ಪ (ತಿಪಟೂರು).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ತಿಪಟೂರು ತಾಲ್ಲೂಕಿನ ಬಳವನೇರಲು, ಹಾಲುಕುರ್ಕೆ, ತಡಸೂರು, ಹೊನ್ನವಳ್ಳಿ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ತಂದಾಗ್ಯೂ ಇದುವರೆಗೂ ವೈದ್ಯಾಧಿಕಾರಿಗಳನ್ನು ನೇಮಿಸದೆ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮೇಲ್ಕಂಡ ಸ್ಥಳಗಳಿಗೆ ವೈದ್ಯಾಧಿಕಾರಿಗಳನ್ನು ಎಷ್ಟು ದಿನಗಳಲ್ಲಿ ನೇಮಕ ಮಾಡಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಬಳವನೇರಲು ಮತ್ತು ಹೊನ್ನವಳ್ಳಿ ಆಸ್ಪತ್ರೆಗಳಿಗೆ ಲೋಕಸೇವಾ ಆಯೋಗದಿಂದ ಆಯ್ಕೆಯಾದ ಡಾಕ್ಟರನ್ನು ನೇಮಿಸಿದೆ. ಹಾಲುಕುರ್ಕೆಗೆ ಮೂರನೆಯ ದರ್ಜೆ ಡಾಕ್ಟರನ್ನು ನೇಮಿಸಬೇಕಾಗುವುದು. ಮತ್ತು ತಡಸೂರು (ಸಿದ್ಧರಾಮ ದೇವರಪಾಳ್ಯ) ಆಸ್ಪತ್ರೆಯಲ್ಲಿ ವೈದ್ಯರು ಹಾಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಶ್ರೀ ಎಸ್. ಪಿ. ಗಂಗಾಧರಪ್ಪ.—ಹುಬ್ಬಳ್ಳಿ ಹೆಡ್ ಕ್ವಾರ್ಟರ್ಸ್‌ನಲ್ಲಿ ತುಂಬಾ ಜನಸಂಖ್ಯೆ ಇದೆ. ಆ ಜನರು ಒಂದು ವರ್ಷದಿಂದ ಬತ್ತಾಯಿಸುತ್ತಿದ್ದರೂ ಅಲ್ಲಿಗೆ ವೈದ್ಯರನ್ನು ಕಳುಹಿಸಿಕೊಟ್ಟಿಲ್ಲ. ಹೊಸದಾಗಿ ಬಂದ ಸಿನೇ ದರ್ಜೆಯ ವೈದ್ಯರನ್ನಾದರೂ ಅಲ್ಲಿಗೆ ಪೋಸ್ಟ್ ಮಾಡುತ್ತೀರಾ?

ಶ್ರೀ ಪಿ. ಜಿ ಆರ್. ಸಿಂಧ್ಯಾ.—ನೆಮ್ಮಲ್ಲಿ ೩ನೇ ದರ್ಜೆ ವೈದ್ಯರಿದ್ದಾರೆ, ಅವರಲ್ಲಿ ಒಬ್ಬರನ್ನು ಸಧ್ಯದಲ್ಲೇ ನೇಮಕ ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ. ಆದರೆ ಲೋಕಸೇವಾ ಆಯೋಗದಿಂದ ನೇಮಕವಾಗಿರತಕ್ಕ ವೈದ್ಯರನ್ನು ನಿಯಮದ ಪ್ರಕಾರ ನೇಮಿಸುವುದಕ್ಕಾಗುವುದಿಲ್ಲವೆಂದು ನೇಮಕ ಮಾಡಿಲ್ಲ. ಎಲ್ಲಿ ಮಾಡಬಹುದೋ ಅಲ್ಲಿ ಮಾಡಿದ್ದೇವೆ.

ಶ್ರೀ ಎಸ್.ಪಿ. ಗಂಗಾಧರಪ್ಪ.— ಈ ಜನವರಿ ತಿಂಗಳೊಳಗೆ ಎಲ್ಲ ಆಸ್ಪತ್ರೆಗಳಿಗೂ ವೈದ್ಯರನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದಿರಿ. ಆ ರೀತಿ ಮಾಡಿದ್ದೀರಾ? ಯಾವಾಗ ಮಾಡುತ್ತೀರಿ?

ಅಧ್ಯಕ್ಷರು.— ಸಾಧ್ಯವಾದಷ್ಟು ಶೀಘ್ರವಾಗಿ ಮಾಡುತ್ತೇವೆಂದು ಹೇಳುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.— ಜನವರಿ ತಿಂಗಳಲ್ಲಿ ರಾಜ್ಯದಲ್ಲಿರತಕ್ಕ ಬಹುತೇಕ ಎಲ್ಲ ಆಸ್ಪತ್ರೆಗಳಿಗೂ ವೈದ್ಯರನ್ನು ನೇಮಿಸುತ್ತೇವೆಂದು ಕಳೆದ ಸಾರಿ ಇಲಾಖೆಯ ಬೇಡಿಕೆಗಳ ಚರ್ಚೆಯ ಸಂಬಂಧದಲ್ಲಿ ಹೇಳಿದ್ದೆ. ಆದೇ ರೀತಿ, ೧೯೮೩–೮೪ನೇ ಸಾಲಿನಲ್ಲಿ ನಾವು ೬೨೩ ಜನ ವೈದ್ಯರನ್ನು ನೇಮಿಸಿದ್ದೇವೆ. ೩೨೩ ಜನ ವೈದ್ಯರನ್ನು ಮೊನ್ನೆ ನೇಮಕ ಮಾಡಿದ್ದೇವೆ. ೩೭೬ ಮಂದಿ ಮಹಿಳಾ ವೈದ್ಯರನ್ನು ಮತ್ತು ೫೬ ಜನ ದಂತ ವೈದ್ಯರನ್ನು ನೇಮಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಅವರಿಗೆ ಸಂದರ್ಶನ ಕೂಡ ನಡೆಯುತ್ತಿದೆ. ಈಗಾಗಲೇ ೬೨೩ ಮಂದಿ ವೈದ್ಯರನ್ನು ಬಹುತೇಕ ಆಸ್ಪತ್ರೆಗಳಿಗೆ ನೇಮಿಸಿ ಅವರಿಗೆಲ್ಲ ಒಂದು ವಾರದೊಳಗೆ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಬೇಕೆಂದು ಹೇಳಿದ್ದೇವೆ.

ಸರ್ಕಾರದ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇರುವ ವಿಚಾರ

೬೩. (೧೦೨) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರ್ಕಾರದವರ ಪ್ರತಿ ಇಲಾಖೆಯಲ್ಲಿಯೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲ ವರ್ಗದ ಹುದ್ದೆಗಳು ಖಾಲಿ ಇರುವುದರಿಂದ ಸರ್ಕಾರದವರ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯಲು ಅಡ್ಡಿಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವ ಕೈಗೊಂಡಿರುವ ಕ್ರಮ ಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳು ಸುಮಾರು ೪೬,೫೦೦ ಎಂಬುದಾಗಿ ಅಂದಾಜು ಮಾಡಲಾಗಿದೆ. ಇಲಾಖಾವಾರು ಖಾಲಿ ಹುದ್ದೆಗಳ ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಸೂಚಿಸಲಾಗಿದೆ.

ಆ) ಕೆಲವು ಹುದ್ದೆಗಳು ಖಾಲಿ ಇರುವುದರಿಂದ ಸರ್ಕಾರದ ಕೆಲಸಕಾರ್ಯಗಳಿಗೆ ಸ್ವಲ್ಪಮಟ್ಟಿಗೆ ಅಡ್ಡಿ ಉಂಟಾಗಿರಬಹುದು.

ಇ) ಈಗಾಗಲೇ ಸುಮಾರು ೬೭ ನೇಮಕಾತಿ ಸಮಿತಿಗಳನ್ನು ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ರಚಿಸಲಾಗಿದೆ. ಲೋಕಸೇವಾ ಆಯೋಗವು ಖಾಲಿ ಇರುವ ಸಹಾಯಕ/ಪ್ರಥಮದರ್ಜೆ, ಕಿರಿಯ ಸಹಾಯಕ/ಎರಡನೇ ದರ್ಜೆ ಗುಮಾಸ್ತರುಗಳ ಹುದ್ದೆಗಳಿಗೆ ಅರ್ಜಿಯನ್ನು ಕರೆದಿದೆ ಮತ್ತು ಇಷ್ಟರಲ್ಲಿಯೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಪರೀಕ್ಷೆಯನ್ನು ನಡೆಸಲಿದೆ.